## ರಾಯರ ಶಿಸ್ತು

ಬಂಗ್ಲೆ ರಾಮರಾಯರದು ಭಾರೀ ಶಿಸ್ತು. ಯಾರೇ ಅವರ ಕೋಣೆಯ ಒಳ ಬರುವಾಗ, ಹೊರ ಹೋಗುವಾಗ ಬಾಗಿಲು ಹಾಕಿ ಸಾಗಬೇಕು. ಅದು ಅವರ ನಿಯಮ. ಅಂದು ಬೆಳಗಿನ ಡ್ಯೂಟಿ ಮುಗಿಸಿದ ಕೆಲಸಗಾರ ಹೋಗುವೆನೆಂದು ಹೇಳಿ ನಾಲ್ಕು ಮೈಲು ದೂರದ ತನ್ನ ಮನೆಯತ್ತ ಹೋಗಿದ್ದ. ಅವನಿನ್ನೂ ಮನೆ ಸೇರಿರಲಿಲ್ಲ, ಆಗಲೇ ರಾಯರಿಂದ ಫೋನು, 'ಬೇಗ ಬಾ' ಎಂದು. ತಡಬಡಾಯಿಸಿ ಏದುಸಿರು ಬಿಡುತ್ತ ಓಡಿ ಬಂದ ಕೆಲಸದವನಿಗೆ ರಾಯರು ಹೇಳಿದರು, 'ರೂಮಿನ ಬಾಗಿಲು ಹಾಕಿ ಹೋಗಿಲ್ಲ, ಹಾಕಿಕೊಂಡು ಹೋಗು'.

**ಕೆ. ಶ್ರೀನಿವಾಸರಾವ್**





## ಅಸಾಧ್ಯ!

ಯಾರೂ ಇಡದ ಹೆಸರು ಇಡಬೇಕೆಂದು ಪೋಷಕರು ಅವನಿಗೆ 'ಅಸಾಧ್ಯ' ಎಂದು ಹೆಸರಿಟ್ಟಿದ್ದರು. ತನ್ನ ಹೆಸರಿನ ಬಗ್ಗೆ ಸಾಕಷ್ಟು ಬೇಸರ ಹೊಂದಿದ್ದ ಆತ, ಮರಣಶಯ್ಯೆಯಲ್ಲಿದ್ದಾಗ ತನ್ನ ಹೆಂಡತಿಗೆ, 'ನನ್ನ ಗೋರಿಯ ಮೇಲೆ ಏನಾದರೂ ಬರೆಸು, ಆದರೆ ನನ್ನ ಹೆಸರು ಮಾತ್ರ ಹಾಕಬೇಡ' ಎಂದು ಹೇಳಿದ. ಅವನ ಆಸೆಯಂತೆಯೇ ಅವನ ಹೆಂಡತಿ ನಡೆದುಕೊಂಡಳು. ಅವನ ಗೋರಿಯ ಮೇಲೆ 'ನನ್ನನ್ನು ಸದಾ ಪ್ರೀತಿಸಿದ, ಎಂದಿಗೂ ಸುಳ್ಳು ಹೇಳದ, ಮನಸ್ಸಿನಲ್ಲಿಯೂ ಮೋಸ ಮಾಡದ ವ್ಯಕ್ತಿ ಇಲ್ಲಿ ಮಲಗಿದ್ದಾನೆ' ಎಂದು ಬರೆಸಿದಳು. ಅದನ್ನು ನೋಡಿದವರೆಲ್ಲಾ, 'ಇದು ಅಸಾಧ್ಯ' ಎಂದು ಉದ್ಗರಿಸಿ ಮುನ್ನಡೆಯತೊಡಗಿದರು.

**ವಾ. ಮುರಳೀಧರ**